CoverageReport: TCS IT Wiz – Bangalore Edition

**Publication:**Prajavani
**Date:** 30/07/2014
**Edition:** Bangalore
**Page No:** 3
**Headline:** TCS IT WIZ

# 'ಟಿಸಿಎಸ್ ಐಟಿ ವಿಜ್' ರಸಪ್ರಶ್ನೆ ಸ್ಪರ್ಧೆ

'ಟಿಸಿಎಸ್ ಐಟಿ ವಿಜ್–2014' ರಸಪ್ರಶ್ನೆ ಸ್ಪರ್ಧೆಯ ಬೆಂಗಳೂರು ಆವೃತ್ತಿ ಆಗಸ್ಟ್ 7ರಂದು ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿದೆ.

'ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್(ಟಿಸಿಎಸ್)' ವತಿಯಿಂದ ನಡೆಸಲಾಗುವ ಈ ಸ್ಪರ್ಧೆಯಲ್ಲಿ 8ನೇ ತರಗತಿಯಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದು. ಪ್ರತಿಯೊಂದು ಶಾಲೆ, ಕಾಲೇಜಿನಿಂದಲೂ ಇಬ್ಬರು ವಿದ್ಯಾರ್ಥಿಗಳನ್ನು ಒಳಗೊಂಡಂತಹ ತಲಾ 10 ತಂಡಗಳನ್ನು ಸ್ಪರ್ಧೆಗೆ ಕಳುಹಿಸಿಕೊಡಲು ಅವಕಾಶವಿದೆ.

ಆಸಕ್ತ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಆಗಸ್ಟ್ 4ರ ಒಳಗೆ ತಮ್ಮ ವಿದ್ಯಾಸಂಸ್ಥೆ ಮೂಲಕವೇ ಪ್ರವೇಶ ಪತ್ರ ಪಡೆದು ಕಳುಹಿಸಬೇಕು. ಪ್ರವೇಶ ಉಚಿತ.



2013ರ 'ಟಿಸಿಎಸ್ ಐಟಿ ವಿಜ್' ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳು –ಸಂಗ್ರಹ ಚಿತ್ರ

## ಸ್ಪರ್ಧೆಯ ವಿವರ

ಲಿಖಿತ ಪರೀಕ್ಷೆ ಮೂಲಕ ಅರ್ಹತೆ ಪಡೆದುಕೊಳ್ಳುವ ಆರು ತಂಡಗಳು ಪ್ರಾದೇಶಿಕ ಸುತ್ತಿನ 'ಟಿಸಿಎಸ್ ಐಟಿ ವಿಜ್' ರಸಪ್ರಶ್ನೆ ಸ್ಪರ್ಧೆಯ ಅಂತಿಮ ಸುತ್ತಿಗೆ ಆಯ್ಕೆಯಾಗುತ್ತವೆ. ಪ್ರಾದೇಶಿಕ ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ವಿಜೇತವಾಗುವ ತಂಡ ಅಂತರರಾಷ್ಟ್ರೀಯ ಮಟ್ಟದ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಪಡೆದುಕೊಳ್ಳುತ್ತದೆ. ಈ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಸಿಂಗಪುರ, ಯುನೈಟೆಡ್ ಅರಬ್ ಎಮಿರೇಟ್ಸ್ ಮೊದಲಾದ ಪ್ರತಿನಿಧಿಗಳ ತಂಡಗಳೂ ಭಾಗವಹಿಸಲಿವೆ.

## ಟ್ವೀಟ್ ಮಾಡಿ

ಪ್ರಾದೇಶಿಕ ಸ್ಪರ್ಧೆಯ ಅಂತಿಮ ಸುತ್ತಿನ ಸ್ಪರ್ಧಿಗಳಿಗೆ ಟ್ವಿಟರ್ ಸ್ಪರ್ಧೆಯೂ ಇರುತ್ತದೆ. ಇದರಲ್ಲಿ ವಿಜೇತರಾದ ಇಬ್ಬರು ಬ್ಲ್ಯೂಟೂತ್ ಸ್ಪೀಕರ್‌ಗಳನ್ನು ಬಹುಮಾನವಾಗಿ ಪಡೆಯುವರು.

ಈ ಟ್ವಿಟರ್ ಸ್ಪರ್ಧೆಯಲ್ಲಿ ಪ್ರತಿ ಟ್ವೀಟ್‌ಗೂ ಪಾಯಿಂಟ್‌ಗಳನ್ನು ನೀಡಲಾಗುತ್ತದೆ. ಚಿತ್ರ ಸಹಿತವಾದ ಟ್ವೀಟ್‌ಗೆ 3 ಪಾಯಿಂಟ್‌ಗಳಿರುತ್ತವೆ. ಮರಳಿ ಟ್ವೀಟ್ (ರೀ ಟ್ವೀಟ್) ಮಾಡಿದ್ದಕ್ಕೆ 5 ಪಾಯಿಂಟ್ ಸ್ಪರ್ಧಿಗಳ ಖಾತೆಗೆ ಜಮಾ ಆಗುತ್ತದೆ. 14 ನಗರಗಳಲ್ಲಿ ನಡೆಯುವ ಈ ಟ್ವಿಟರ್ ಸ್ಪರ್ಧೆಯಲ್ಲಿ ಅತ್ಯಧಿಕ ಟ್ವೀಟ್ ಪಾಯಿಂಟ್‌ಗಳನ್ನು ಗಳಿಸಿದ ಸ್ಪರ್ಧಿಯು ಮುಂಬೈನಲ್ಲಿ ನಡೆಯುವ 'ಟಿಸಿಎಸ್ ಐಟಿ ವಿಜ್' ಸ್ಪರ್ಧೆಯನ್ನು ವೀಕ್ಷಿಸಲು ಅವಕಾಶ ಪಡೆದುಕೊಳ್ಳುವರು.

ಈ ಟ್ವಿಟರ್ ಸ್ಪರ್ಧೆಯಲ್ಲಿ ಮೊದಲಿಗೆ ಮೂರು ಪ್ರಶ್ನೆಗಳು ತೆರೆಯ ಮೇಲೆ ಕಾಣಿಸಿಕೊಳ್ಳುತ್ತವೆ. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಇದಕ್ಕೆ ಉತ್ತರವನ್ನು @TCStweetwiz ವಿಳಾಸಕ್ಕೆ ಟ್ವೀಟ್ ಮಾಡಬೇಕು.

ಈ ರಸಪ್ರಶ್ನೆಯು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಒಳಗೊಂಡಂತೆ ವೈವಿಧ್ಯಮಯ ಅಪ್ಲಿಕೇಷನ್‌ಗಳನ್ನು ಕುರಿತೇ ಗಮನ ಕೇಂದ್ರೀಕರಿಸಿರುತ್ತದೆ.

ವಿಳಾಸ: 'ಟಿಸಿಎಸ್ ಐಟಿ ವಿಜ್ ಕಾರಿಡಾರ್', ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಎಸ್‌ಜೆಎಂ ಟವರ್, ನಂ. 18, ಶೇಷಾದ್ರಿ ರಸ್ತೆ, ಗಾಂಧಿ ನಗರ, ಬೆಂಗಳೂರು– 560 009.

ವೆಬ್‌ಸೈಟ್: www.tcsitwiz.com.

ಇ ಮೇಲ್ : contactus@tcsitwiz.com

ಮಾಹಿತಿಗೆ: 080 67246000

⌘

CoverageReport: TCS IT Wiz – Bangalore Edition

**Publication:**Prajavani**Date:** 08/08/2014**Edition:** Bangalore
**Page No:** 2
**Headline:**St. Paul's bags first prize at TCS IT WIZ



ನಗರದಲ್ಲಿ ಗುರುವಾರ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಸಂಸ್ಥೆ ಆಯೋಜಿಸಿದ್ದ 'ಟಿಸಿಎಸ್ ಐಟಿ ವಿಜ್' ಮಾಹಿತಿ ತಂತ್ರಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಸೇಂಟ್ ಪಾಲ್ಸ್ ಇಂಗ್ಲಿಷ್ ಶಾಲೆಯ ಸಿ. ಹರಿಕಿರಣ್ ಮತ್ತು ಸಿದ್ಧಾರ್ಥ ಶ್ರೀವತ್ಸ ಅವರನ್ನು (ಎಡದಿಂದ ಮೂರು ಮತ್ತು ನಾಲ್ಕನೆಯವರು) ದ್ವಿತೀಯ ಸ್ಥಾನ ಪಡೆದ ಕುಮಾರನ್ ಚಿಲ್ಡ್ರನ್ಸ್ ಹೋಮ್‌ನ ಸಿ. ಭಾರ್ಗವ್ ಮತ್ತು ಅಭಿಷೇಕ್ ಕೃಷ್ಣ ಅವರು ಅಭಿನಂದಿಸಿದರು —ಪ್ರಜಾವಾಣಿ ಚಿತ್ರ

# ಮಾಹಿತಿ ತಂತ್ರಜ್ಞಾನ ರಸಪ್ರಶ್ನೆ: ಸೇಂಟ್ ಪಾಲ್ಸ್ ಚಾಂಪಿಯನ್

ಬೆಂಗಳೂರು: ನಗರದಲ್ಲಿ ಗುರುವಾರ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಸಂಸ್ಥೆ ಆಯೋಜಿಸಿದ್ದ 'ಟಿಸಿಎಸ್ ಐಟಿ ವಿಜ್' ಮಾಹಿತಿ ತಂತ್ರಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಸೇಂಟ್ ಪಾಲ್ಸ್ ಇಂಗ್ಲಿಷ್ ಶಾಲೆ ತಂಡ ಮೊದಲ ಬಹುಮಾನ ಗೆದ್ದುಕೊಳ್ಳುವ ಮೂಲಕ ರಾಷ್ಟ್ರಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯಿತು.

ಈ ಸ್ಪರ್ಧೆಯಲ್ಲಿ 1,100ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸೇಂಟ್ ಪಾಲ್ಸ್ ಇಂಗ್ಲಿಷ್ ಶಾಲೆಯ ಸಿ. ಹರಿಕಿರಣ್ ಮತ್ತು ಸಿದ್ಧಾರ್ಥ ಶ್ರೀವತ್ಸ ಅವರಿದ್ದ ತಂಡ 55 ಪಾಯಿಂಟ್ ಸಂಗ್ರಹಿಸುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿತು. ಕಳೆದ ವರ್ಷವೂ ಇದೇ ತಂಡ ಪ್ರಾದೇಶಿಕ ಚಾಂಪಿಯನ್ ಪಟ್ಟವನ್ನು ಪಡೆದಿತ್ತು.

ವಿಜೇತರಿಗೆ 'ಐಪಾಡ್ ಏರ್' ಉಪಕರಣವನ್ನು ಬಹುಮಾನವಾಗಿ ನೀಡಲಾಯಿತು. ಕುಮಾರನ್ ಚಿಲ್ಡ್ರನ್ಸ್ ಹೋಮ್‌ನ ಸಿ. ಭಾರ್ಗವ್ ಮತ್ತು ಅಭಿಷೇಕ್ ಕೃಷ್ಣ ಅವರ ಜೋಡಿ ರನ್ನರ್ ಅಪ್‌ಗೆ ತೃಪ್ತಿಪಡಬೇಕಾಯಿತು.

ಸ್ಪೇಸ್ ಪ್ಯಾಕ್, ಈಯರ್ ಫೋನ್, ಪೆನ್ ಡ್ರೈವ್, ಸ್ಪೀಕರ್ ಮತ್ತಿತರ ಉಪಕರಣಗಳನ್ನು ಕೊಡುಗೆಯಾಗಿ ನೀಡಲಾಯಿತು. ರಣಜಿ ಆಟಗಾರ ಲೋಕೇಶ್ ರಾಹುಲ್ ವಿಜೇತರಿಗೆ ಬಹುಮಾನ ವಿತರಿಸಿದರು.

ಸ್ಪರ್ಧೆಗೆ ಸಂಬಂಧಪಟ್ಟ ಟ್ವಿಟರ್ ಸ್ಪರ್ಧೆಯಲ್ಲಿ 4,700 ಟ್ವೀಟ್‌ಗಳು ದಾಖಲಾದವು. ಈ ಟ್ವಿಟರ್ ಸ್ಪರ್ಧೆಯಲ್ಲಿ ವಿಜೇತರಾದ ಇಬ್ಬರು ಸ್ಪರ್ಧಿಗಳು ಬಹುಮಾನವಾಗಿ ಬ್ಲ್ಯೂಟೂತ್ ಸ್ಪೀಕರ್ ಮತ್ತು ಕ್ಯಾಪ್ ಪಡೆದುಕೊಂಡರು. ಅಂತಿಮ ಸುತ್ತಿನ ಸ್ಪರ್ಧೆಯನ್ನು ದೇಶದಾದ್ಯಂತ ಆಸಕ್ತರು ವೀಕ್ಷಿಸಲು ಅವಕಾಶವಾಗುವಂತೆ ಅಂತರ್ಜಾಲ ಸಂಪರ್ಕದ ಮೂಲಕ (ವೆಬ್ ಸ್ಟ್ರೀಮಿಂಗ್) ನೇರ ಪ್ರಸಾರದ ವ್ಯವಸ್ಥೆಯನ್ನೂ ಮಾಡಲಾಗಿತ್ತು.